ಅವಳು ಹೋದವಳು ಒಂದು ಕಾಲು ಜಾರುವಂತಿರುವ ತೊರೆ ಎದುರು ನಿಂತಳು. ತೊರೆಯಲ್ಲಿ ಜುಳುಜುಳು ನೀರು ಯಾರನ್ನೋ ಹುಡುಕುವಂತೆ ಸಳಸಳ ಹೋಗುತ್ತಿತ್ತು. ಸಾಗುವ ನೀರಿಗೆ ಸಿಕ್ಕ ಕಲ್ಲುಗಳೆಲ್ಲಾ ಕಾಲಿಟ್ಟರೆ ಜಾರುವಂತಿದ್ದವು. ಅವಳು ತಿರುಗಿ ನಿಂತಳು. ತೊಟ್ಟ ಬಟ್ಟೆಯ ಒಳಗೆ ಏರಿಳಿಯುವ ದೇಹ, ಅಂಕುಡೊಂಕುಗಳ ಒಳಗೆ ತೀರದ ದಾಹ. ತೊಯ್ದ ಬೆವರನ್ನು ತೊರೆಯಲ್ಲಿ ತೊಳೆದುಕೊಳ್ಳುವಂತೆ ಅಲ್ಲೇ ಕುಳಿತುಬಿಟ್ಟಳು. ಆ ಶೀತಲಕ್ಕೆ ಅವಳು ಹಗುರಾಗುತ್ತಾ ಹೋದ ಹಾಗೆ ಅವಳ ಬಟ್ಟೆಗಳು ಭಾರವಾದವು. ಉಬ್ಬಿಕೊಂಡವು. ಅವಳು ಕ್ರಮೇಣ ತನ್ನ ದೇಹವನ್ನು ಬಾಗಿಸುತ್ತಾ ಹೋದಳು, ಬಾಗಿದ ಬಿಲ್ಲಿನ ಹಗ್ಗಕ್ಕೆ ಹರಯದ ಬಾಣವನ್ನು ಹೂಡಿದವಳಂತೆ ಹಿಗ್ಗಿದಳು.

ಕಳ್ಳನಂತೆ ಪ್ರೀತಿಸಿದ, ಬಯಸಿದ ದೇಹವೇ ಹಾಗೊಂದು ದಾಹವಾಗಿ ಕಣ್ಣೆದುರು ನಿಂತಿದ್ದನ್ನು ಅವಕಾಶ ಎನ್ನಲೇ, ಅಚ್ಚರಿ ಎನ್ನಲೇ?

ಬಾ ಅಂತ ಕೈ ತೆರೆದು ಅವಳು ಕರೆಯಲಿಲ್ಲ. ಕಣ್ಮುಚ್ಚಿ ಹಾಗೇ ತೊರೆಯಲ್ಲೇ ಮಲಗಿದಳು. ಅವಳ ಕೆನ್ನೆಯ ಇಳುಕಲಿನ ಪುಟ್ಟಪುಟ್ಟ ಕೂದಲ ಒದ್ದೆ ಪಸೆಗೆ ನಾನು ರೋಮಾಂಚನಗೊಂಡೆ. ಮೊದಲ ಸಲ ತಲೆ ತಿರುಗಿತು. ಅವಳನ್ನು ನಾನು ಸುರಭಿ ಅಂತಲೇ ಬಯಸಿದೆನೇ, ಗಂಡೊಬ್ಬ ಅಂಥ ನಿರುಪಾಯ ಗಳಿಗೆಯಲ್ಲಿ ಹಾಗೇ ವರ್ತಿಸುವನೇ – ಗೊತ್ತಿಲ್ಲದೇ ಹೋಗಿ ಅವಳನ್ನು ತಬ್ಬಿಕೊಂಡೆ. ದೇಹದ ಸುಡುಸುಡು ಬಿಸಿಗೆ ನೀರೂ, ಅವಳೂ ಒಟ್ಟಿಗೇ ಸ್ಪಂದಿಸಿದವು. ಅವಳು ಕೊಂಚ ಕೊಸರಿಕೊಂಡಳು, ನಾನು ಬಿಗಿಯಾದೆ, ಅವಳು ಕೂಗಲು ಹೋದಳು, ನಾನು ಆ ಅವಕಾಶ ಕಸಿದುಕೊಂಡೆ. ಬೆಟ್ಟದ ಆ ತುದಿಯಲ್ಲಿ ಆವೇಶದ ಬೆಟ್ಟ ನನ್ನ ದೇಹವನ್ನೇರುತ್ತಿತ್ತು. ನಾನು ಪಶುವಾದೆ, ಅವಳು ಬಿಗಿ ಸಡಿಲುತ್ತಾ ಮೆದುವಾಗುತ್ತಾ ಹೋದಳು. ನಾನು ಬಯಸಿದ್ದೇನು, ಅವಳ ಬಳಸಿದ್ದೇನನ್ನು, ಇಬ್ಬರೂ ದೇಹವನ್ನು ಯಾವ ನೆಪವೊಡ್ಡಿ ಪಳಗಿಸಿಕೊಂಡಿದ್ದೆವು? ಒಂದೂ ಅರಿಯದು.

ಎಲ್ಲ ಮುಗಿದಾಗ ದಣಿದ ಮೈ ಒಣಗಿತ್ತು. ಬೆಟ್ಟವನ್ನೇ ಮಣಿಸಿದ ಸಂಭ್ರಮ, ಅವಳು ಥಟ್ಟನೆ ಎದ್ದು ಕುಳಿತವಳು ಸುತ್ತಮುತ್ತ ನೋಡಿದಳು, ಹೌಹಾರಿದಳು, ಅಳು ಒತ್ತರಿಸಿ ಬಂತು, ಬೆತ್ತಲನ್ನು ಮುಚ್ಚಿಕೊಂಡಳು. ಒಣಗದೇ ಇದ್ದ ಬಟ್ಟೆ ತೊಟ್ಟುಕೊಂಡಳು. ಬಾಟಲಿಯನ್ನು ಅಲ್ಲೇ ಬಿಟ್ಟಳು.

★★★

ಒಂದು ಕತೆ ಬದುಕನ್ನು ಇಷ್ಟು ಕಂಗೆಡಿಸಿ ಹಾಕುತ್ತದೆ ಅಂತ ನನಗೆ ನಿಜವಾಗಿಯೂ ಗೊತ್ತಿರಲಿಲ್ಲ.

ಆ ಘಟನೆಯ ನಂತರ ಸುಸ್ತಾಗಿ ಮೈಚೆಲ್ಲಿ ನಿದ್ದೆಹೋದ ವಿಶ್ವನ ಎದುರು ನಾನು, ಅರ್ಧದಲ್ಲೇ ತಪ್ಪಿ ಉಳಿದು ಹೋದ ರಮಾಕಾಂತ ಮತ್ತು ಸುರಭಿ ಪ್ರತ್ಯಕ್ಷವಾದೆವು. ನಿಮ್ಮನ್ನು ಕಾದು ಕಾದು ಸಾಕಾಯ್ತು ಅಂತ ವಿಶ್ವ ನಿದ್ದೆ ತಿಳಿದು ಮೇಲೆದ್ದ. ಸುರಭಿಯನ್ನು ಮತ್ತೆ ಓಲೈಸುವುದಕ್ಕೆ ಹೋದರೂ ಸುರಭಿ ಅವನಿಂದ ದೂರವೇ ಉಳಿದಳು. ಮಾತು ಕಡಿಮೆಯಾಗಿತ್ತು, ನನಗೂ ಮಾತು ಬೇಕಿರಲಿಲ್ಲ. ರಮಾಕಾಂತ ಒಂದು ನಿದ್ದೆ ತೆಗೆದಿದ್ದರಿಂದ ಇಳಿದು ಬರುವ ತನಕ ಏನೇನೋ ಜೋಕು ಹೇಳಿ ಹರಟುತ್ತಲೇ ಬಂದ.

ಅದಾದಮೇಲೆ ನಾವು ಒಬ್ಬರಿಗೊಬ್ಬರು ಸಿಗುವುದು ಕಡಿಮೆಯಾಯಿತು. ಕೆಲ ತಿಂಗಳುಗಳ ನಂತರ ವಿಶ್ವಜಿತ್ ಮದುವೆ ಕರೆಯೋಲೆ ಕಳಿಸಿದ. ಮದುವೆಯಾಗುತ್ತಿರುವ ಹೆಣ್ಣು ಆಕೆಯೇ, ಹೌದು ಸುರಭಿಯೇ ಆಗಿದ್ದಳು.

ಅವಳ ದೇಹದ ನೆನಪು ಮತ್ತು ಅವಳ ಪ್ರೀತಿಯ ನೆನಪು ಎರಡೂ ಬೇರೆ ಬೇರೆಯಾಗಿಯೇ ನನ್ನನ್ನು ಬಹಳ ದಿನಗಳ ಕಾಲ ಕಾಡುತ್ತಿದ್ದವು. ಅವಳನ್ನು ಒಮ್ಮೆ ನೋಡಬೇಕು, ಒಂದು ಏಕಾಂತದಲ್ಲಿ ಅವಳನ್ನು ಹಿಡಿದೆಳೆದು ಬೆಟ್ಟದೆದುರು ಚುಂಬಿಸಿದಷ್ಟೇ ತೀವ್ರವಾಗಿ ಚುಂಬಿಸಬೇಕೆಂದು